**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.2324/2025**

**ಸಿ.ಡಬ್ಲ್ಯೂ-10**

**ಪಿ.ಡಬ್ಲ್ಯೂ-04**

| | |
|---|---|
| ಸಾಕ್ಷಿಯ ಹೆಸರು | : ಡಾಃಲಕ್ಷ್ಮೀಕಾಂತ ಮೋರೆ |
| ತಂದೆ/ಗಂಡನ ಹೆಸರು | : ಕಾಶೀನಾಥ |
| ವಯಸ್ಸು | : 35 ವರ್ಷ |
| ಉದ್ಯೋಗ | : ವೈಧ್ಯಾಧೀಕಾರಿಗಳು |
| ವಾಸಸ್ಥಳ | : ಬಿದರ |

**ದಿನಾಂಕ:05-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನಾನು 2019 ರಿಂದ 2024 ರವರೆಗೆ ವೈಧ್ಯಾಧಿಕಾರಿಯಾಗಿ ಚಡಚಣ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ12.08.2024 ರಂದು 12.30 ಗಂಟೆಗೆ ಚಾಸಾ 4 ರವರು ನಮ್ಮ ಆಸ್ಪತ್ರೆಗೆ ಹಾಜರಾಗಿ ಹಲ್ಲೆ ಆಗಿರುತ್ತದೆ ಎಂದು ಚಿಕಿತ್ಸೆ ಪಡೆಯಲು ಬಂದಿರುತ್ತಾರೆ. ಸದರಿಯವರನ್ನು ಪರೀಕ್ಷಿಸಲಾಗಿ-

ಸದರಿಯವರಿಗೆ ಎರಡು ಕಿವಿಯಲ್ಲಿ ಕಟ್ಟಾಗಿತ್ತು ಮತ್ತು ತಲೆಯ ಎಡ ಮೇಲ್ಬಾಗದಲ್ಲಿ ಗಾಯವಾಗಿತ್ತು.

ಮೇಲಿನ ಗಾಯಗಳು ಸಾದಾ ಸ್ವರೂಪದ ಗಾಯಗಳು ಇದ್ದು ಅವು ಒಂದು ದಿನದ ಒಳಗಡೆ ಆಗಿರುವಂತಹ ಗಾಯಗಳು ಇರುತ್ತವೆ. ಸದರಿ ಗಾಯಗಳು ಯಾವುದಾದರು ಗಟ್ಟಿ ಅಥವಾ ಮೊಂಡಾದ ವಸ್ತುವಿನಿಂದ ಆಗುವ ಸಂಭವ ಇರುತ್ತದೆ ಎಂದು ಅಭಿಪ್ರಾಯಿಸಿ ಈ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

-2-

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಆರ್.ಆರ್.ಕೆ. ವಕೀಲರಿಂದಃ**

ಚಾಸಾ 4 ರವರು ನಮ್ಮ ಆಸ್ಪತ್ರೆಗೆ ದಿಃ11.08.2024 ರಂದು ರಾತ್ರಿ 10 ಗಂಟೆಗೆ ಬಂದಿರುತ್ತಾರೆ. ಚಾಸಾ 4 ರವರು ಸ್ವತಃ ತಾವೇ ಆಸ್ಪತ್ರೆಗೆ ಬಂದಿದ್ದರು. ಸದರಿಯವರಿಗೆ ಎರಡು ಕಿವಿಯಲ್ಲಿ ಕಟ್ಟಾಗಿತ್ತು ಮತ್ತು ತಲೆಯ ಎಡ ಮೇಲ್ಭಾಗದಲ್ಲಿ ಗಾಯವಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರು ನಮ್ಮ ಆಸ್ಪತ್ರೆಗೆ ಬಂದಿಲ್ಲ ಮತ್ತು ನಾನು ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಮತ್ತು ಪೊಲೀಸರಿಗೆ ಅನುಕೂಲವಾಗುವಂತೆ ನಾನು ಖೊಟ್ಟಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**